





ವೇಳೆಯಲ್ಲಿ ರಾಷ್ಟ್ರೀಯ ಉದ್ಯಾನದ ಬಸ್ಸುಗಳೇ ಪ್ರವಾಸಿಗರನ್ನು ಕರೆದೊಯ್ಯುತ್ತವೆ. ಇಲ್ಲಿಂದ 15 ಮೈಲಿ ಮುಂದೆ ಖಾಸಗಿ ವಾಹನಗಳಿಗೆ ಪ್ರವೇಶವಿಲ್ಲ. ಈ ಶಟಲ್ ಬಸ್‌ಗಳಿಗೆ ಒಮ್ಮೆ ಟಿಕೆಟ್ ಕೊಂಡರೆ ಎಲ್ಲಿ ಬೇಕಾದರೂ ಇಳಿದುಕೊಂಡು ಅಲ್ಲೆಲ್ಲ ಅಲೆದಾಡಿ ಮುಂದಿನ ಬಸ್ ಹತ್ತಿ ಹಳೆಯ ಟಿಕೆಟ್ ತೋರಿಸಿ ಪ್ರಯಾಣ ಮುಂದುವರಿಸಬಹುದು. ಬೇಕಾದ ಆಹಾರ ಪದಾರ್ಥ ಮತ್ತು ನೀರನ್ನು ದೆನಾಲಿಯಿಂದಲೇ ಕೊಂಡು ಹೋಗಬೇಕು. ಮುಂದೆ ಟೂರಿಸ್ಟ್ ಸೆಂಟರ್‌ನಲ್ಲಿ ನೀರು ಬಿಟ್ಟರೆ ಬೇರೇನೂ ಸಿಗುವುದಿಲ್ಲ.

ನಮ್ಮ ಬಸ್ಸಿನ ಡ್ರೈವರ್ ವಿಂಡಮ್ಮ ತುಂಬ ಅನುಭವಸ್ಥ ಹೆಂಗಸು. 'ಅಲಾಸ್ಕಾದ ಹವಾಮಾನದ ಮುಂದಾಲೋಚನೆ ಮಾಡಲಾಗುವುದಿಲ್ಲ, ಅಲ್ಲಿಗೆ ಹೋಗುತ್ತಿದ್ದಂತೆ ಬಿಸಿಲು ಅಥವಾ ಮಳೆ ಬರಬಹುದು, ಮಬ್ಬು ಕವಿಯಬಹುದು, ಸಣ್ಣದಾಗಿ ಹಿಮಪಾತ ಆಗಬಹುದು. ಪ್ರಾಣಿಗಳು ಕೂಡಾ ಸ್ಟೇಟ್ ರೂಲ್‌ಗಳನ್ನು ಅನುಸರಿಸುವುದಿಲ್ಲ ಹೀಗಾಗಿ ಹವಾಮಾನ ಕೆಟ್ಟು, ಪ್ರಾಣಿಗಳು ಕಣ್ಣಿಗೆ ಬೀಳದಿದ್ದರೆ, ಈ ವಿಂಡಿಯನ್ನು ಬಯ್ಯಬೇಡಿ, ನಿಮ್ಮ ಅದೃಷ್ಟವನ್ನು ಮನಸಾರೆ ಬಯ್ಯಿರಿ' ಎಂದು ನಗುತ್ತಾ ಅವಳು ಮೊದಲೇ ಪ್ರಕಟಿಸಿದ್ದಳು.

ಸ್ವಲ್ಪ ದೂರ ಹೋಗುವಷ್ಟರಲ್ಲಿಯೇ ಮೂಸ್ ಗಳು (ನಮ್ಮ ಕಡವೆ ಥರ) ರಸ್ತೆಯ ಪಕ್ಕದ ಕಾಡಿನಲ್ಲಿಯೇ ಮೇಯುತ್ತಿದ್ದುದು ಕಾಣಿಸಿತು. ಈ ಮೂಸ್ ಗಳು ಜಿಂಕೆ ವರ್ಗದ ಪ್ರಾಣಿಗಳಿಗಿಂತ ಆಕೃತಿಯಲ್ಲಿ ದೊಡ್ಡದಾಗಿದ್ದು, ನಮ್ಮಲ್ಲಿಯ ಹೇಸರಗತ್ತೆಗಳನ್ನು ಹೋಲುತ್ತವೆ.